**ದಿಃ 28-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

1) ನಾನು ಹಾಗೂ 2 ನೇ ವಾದಿ ಮತ್ತು 15 ನೇ ಪ್ರತಿವಾದಿ ಸೇರಿ 14 ನೇ ಪ್ರತಿವಾದಿಗೆ ದಿಃ 08-04-1987 ರಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ದಾವಾ ಆಸ್ತಿಗೆ ಬಹಳ ಜನರ ಹೆಸರು ನಮೂದು ಇದ್ದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಅದೇ ರೀತಿ ನಾನು ಹಾಗೂ 2 ನೇ ವಾದಿ ಮತ್ತು 15 ನೇ ಪ್ರತಿವಾದಿ ಸೇರಿ 14 ನೇ ಪ್ರತಿವಾದಿಗೆ ದಿಃ 20.06.1984 ರಲ್ಲಿ 1 ಎಕರೆ 10 ಗುಂಟೆಯನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ದೇವಕ್ಕಾ ಮತ್ತು ಮೃತ ಸಿದ್ದಪ್ಪಾ ಸೇರಿ ಮುತ್ತೆಪ್ಪಾ ಕೆಂಚಪ್ಪಾ ಮುರಗೋಡ ರವರಿಗೆ 4 ಎಕರೆ 1 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2 ನೇ ವಾದಿ 15 ನೇ ಪ್ರತಿವಾದಿ ಸೇರಿ ದಿಃ 08-04-1987 ರಲ್ಲಿ 2 ಎಕರೆ 21 ಗುಂಟೆಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 23-08-1984 ರಲ್ಲಿ ಸದರಿ ದೇವಕ್ಕಾ, 1 ನೇ ಪ್ರತಿವಾದಿ ಹಾಗೂ ಮೃತ ಸಿದ್ದಪ್ಪಾ ಸೇರಿ 14 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಖರೀದಿ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಹಾಜರು ಪಡಿಸುವಾಗ ನಾನು ಯಾವ ಸಾಲಿನಲ್ಲಿ ಮಾಡಲ್ಪಟ್ಟಿರುತ್ತವೆ ಎಂದು ನೋಡಿರುವುದಿಲ್ಲ. 1984 ರಿಂದ ಇಲ್ಲಿಯವರೆಗೆ ಖರೀದಿ ಪಡೆದವರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ನಮೂದಾಗಿದ್ದು ಸರಿ, ಆದರೆ ಯಾವ ರೀತಿ

ನಮೂದಾಗಿರುತ್ತವೆ ಎಂದು ನನಗೆಗೊತ್ತಿಲ್ಲ. ದಾವಾ ಸ್ವತ್ತು ಒಟ್ಟು 13 ಎಕರೆ 4 ಗುಂಟೆ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತು ಇರುವ ಗ್ರಾಮವು ಮೊದಲು ತಳಕಟ್ನಾಳ ಗ್ರಾಮವಾಗಿದ್ದು ಈಗ ಕಪರಟ್ಟಿ ಗ್ರಾಮವಾಗಿರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದಂತೆ 14 ನೇ ಪ್ರತಿವಾದಿ ಒಟ್ಟು 6 ಎಕರೆ 22 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 4 ನೇ ಪ್ರತಿವಾದಿ 6 ಎಕರೆ 22 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ತೋರಿಸಿರುವ ಮೂಲಪುರುಷ ಅಪ್ಪಯ್ಯನಿಗೆ ಇರುವ ಇಬ್ಬರು ಮಕ್ಕಳ ಬಗ್ಗೆ ತೋರಿಸಿರುವುದು ಸರಿ ಇರುತ್ತದೆ. ದಾವಾ ಸ್ವತ್ತುಗಳಲ್ಲಿ ಸದರಿ ಅಪ್ಪಯ್ಯನ ಇಬ್ಬರು ಮಕ್ಕಳಿಗೆ ಅರ್ಧ ಅರ್ಧ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಐಟಮ ನಂಬರ 1 ಮತ್ತು 2 ಸ್ವತ್ತುಗಳಿಗೆ ಕ್ರಮವಾಗಿ 9 ಮತ್ತು 10 ನೇ ಪ್ರತಿವಾದಿಗಳ ಹೆಸರು ನಮೂದಾಗಿವೆ ಎಂದರೆ ಸರಿಯಲ್ಲ.

2) 11 ರಿಂದ 14 ರ ಪ್ರತಿವಾದಿಗಳ ಹೆಸರುಗಳಲ್ಲಿ ತಲಾ 36 ಗುಂಟೆ ಜಮೀನು ನಮೂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 4 ರಿಂದ 14 ರವರು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಗಳು ತಮ್ಮ ಹೆಸರಿನ ಜಮೀನುಗಳ ಮೇಲೆ ಸಾಲ ಪಡೆದು ತಾವೇ ಮರುಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕಬ್ಬನ್ನು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿಯ ದತ್ತಕ

ಪತ್ರವನ್ನು ಯಾರು ಬರೆದುಕೊಂಡಿರುತ್ತಾರೆ ಮತ್ತು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೃತ ದೇವಕ್ಕಾ ದತ್ತಕ ಪಡೆದಿರುವ ಬಗ್ಗೆ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಮೃತ ಸಿದ್ದಪ್ಪಾ ಸದರಿ ದತ್ತಕ ಪತ್ರವನ್ನು ಪ್ರಶ್ನಿಸಿರುವುದಿಲ್ಲ. 1984 ರಲ್ಲಿಯೇ 40 ವರ್ಷಗಳ ಹಿಂದೆಯೇ ಖರೀದಿ ಆಗಿರುವ ವಿಷಯ ಗೊತ್ತಿದ್ದರೂ ಸಹ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ನಾವು ದಾವಾ ಸ್ವತ್ತಿನ ಸ್ವಾ ಧೀನದಲ್ಲಿ ಇರುವುದನ್ನು ತೋರಿಸಲು ನನ್ನ ಬಾಯಿ ಮಾತಿನ ಹೇಳಿಕೆ ಹೊರತು ಪಡಿಸಿ ದಾಖಲೆಗಳು ಇರುವುದಿಲ್ಲ. ದಾವಾ ಕಾರಣ ಇಲ್ಲದೆ ನಾವು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ